ಸಿದ್ಧತೆಯಲ್ಲಿರಬೇಕು. ನಾನು ನನ್ನ ಬ್ಯಾಗಿನಿಂದ ನನ್ನ ಡೈರಿ ತೆಗೆದೆ, ಅದರಲ್ಲಿ ಅವಳ ವಿಳಾಸವಿತ್ತು. ಮೊದಲು ಅವಳು ತುಬ್ಲಿಯಲ್ಲಿರುತ್ತಿದ್ದಳು. ಆದರೆ ಕಳೆದ ವರ್ಷ ರಿಫ್ಫಾಕ್ಕೆ ಶಿಫ್ಟ್ ಆಗಿದ್ದಾಳೆ.

'ನ್ಯಾನ್ಸಿ...' ಮಧುರ ಧ್ವನಿಯೊಂದು ಕೇಳಿ ಬಂತು. ತಲೆಯೆತ್ತಿ ನೋಡಿದೆ, ನನ್ನ ಅಕ್ಕ ನನ್ನನ್ನು ಕರೆಯುತ್ತಿದ್ದಳು. ಅವಳು ತನ್ನ ಪತಿ ಜೋಸಫ್‌ನೊಂದಿಗೆ ನನ್ನನ್ನು ಕರೆದೊಯ್ಯಲು ಏರ್‌ಪೋರ್ಟ್‌ಗೆ ಬಂದಿದ್ದಳು. ನನ್ನ ಮನಸ್ಸಿನ ಊಹಾಪೋಹಗಳೆಲ್ಲವೂ ಕೊನೆಗೊಂಡವು. ಈಗ ರೇಚಲ್ ಮಾತ್ರ ಊಟಕ್ಕಿದ್ದಳು. ನನ್ನನ್ನು ಮನೆಗೆ ಕರೆದೊಯ್ಯುವುದು, ನಗರದಲ್ಲಿ ಅಡ್ಡಾಡಿಸುವುದು, ಇಲ್ಲಿಯ ಜೀವನದ ಬಗ್ಗೆ ಪರಿಚಯಿಸುವುದು... ಎಲ್ಲವೂ ಅವಳ ಜವಾಬ್ದಾರಿಯಾಗಿತ್ತು.

ನಾವು ಸಮೀಪಕ್ಕೆ ಬರುತ್ತಲೇ ರೇಚಲ್ ನನ್ನನ್ನು ಮತ್ತು ನೀಲ್‌ನನ್ನು ಸ್ನೇಹದಿಂದ ತಬ್ಬಿಕೊಂಡು, 'ವೆಲ್‌ಕಮ್ ಟು ಮನಾಮ!' ಎಂದು ಸ್ವಾಗತಿಸಿದಳು. ಅವಳು ತುಂಬಾ ಹೊತ್ತು ನಮ್ಮನ್ನು ತಬ್ಬಿಕೊಂಡೇ ಇದ್ದಳು. ಜೋಸಫ್ ನನ್ನ ಕೈಗಳಿಂದ ಟ್ರೋಲಿಯನ್ನು ತೆಗೆದುಕೊಂಡರು. ಕಾರಿನಲ್ಲಿ ಕೂತಾಗ ರೇಚಲ್ ನನಗೆ ಒಂದು ಸಣ್ಣ ನಿದ್ದೆಯನ್ನು ಮಾಡು, ಮನೆ ಸಾಕಷ್ಟು ದೂರವಿದೆ ಎಂದಳು. ಆದರೆ ನನಗೆ ನಿದ್ರೆ ಮಾಡುವ ಯೋಚನೆ ಇರಲಿಲ್ಲ. ಮೊದಲನೆಯದಾಗಿ ನಾನು ರೇಚಲಳೊಂದಿಗೆ ಮಾತನಾಡುವುದಿತ್ತು, ಎರಡನೆಯದಾಗಿ ನಗರದ ದೃಶ್ಯವನ್ನು ನೋಡಬೇಕಿತ್ತು.

ರೇಚಲ್ ಹೇಳಿದಳು, 'ನಾವು ಕಿಂಗ್ ಫೈಜಲ್ ಹೈವೇ ಮತ್ತು ಶೇಖ್ ಖಲೀಫಾ ಬೀನ್ ಸಲಮಾನ್ ಹೈವೇಯಿಂದ ಮನೆಗೆ ಹೋಗುತ್ತಿದ್ದೇವೆ'. ನಾನು ಕಿಟಕಿಯಿಂದ ಹೊರಗೆ ನೋಡಿದೆ. ಈ ಜಗತ್ತು ಒಂದು ಅಗಾಧ ಸಾಗರ, ಇದನ್ನು ಎಷ್ಟೇ ಮಥಿಸಿದರೂ ಕಡಿಮೆಯೇ. ಹೊಸ ಮುಖಗಳು, ಹೊಸ ವಾತಾವರಣ, ಹೊಸ ಸಂಸ್ಕೃತಿ, ಹೊಸ ಊಟೋಪಚಾರ, ಹೊಸ ಉಡುಗೆ–ತೊಡುಗೆ... ನನಗೆ ಮನಾಮಾ ಯೂರೋಪಿಗಿಂತ ಕಡಿಮೆ, ಆದರೆ ಭಾರತಕ್ಕಿಂತ ಹೆಚ್ಚು ಅಭಿವೃದ್ಧಿಯನ್ನು ಹೊಂದಿದೆ ಎಂದು ಅನ್ನಿಸಿತು. ಸುಮಾರು ಮೂವತ್ತೈದು ನಿಮಿಷಗಳ ದೂರದಲ್ಲಿದ್ದ ಒಂದು ಸುಂದರ ಪ್ರದೇಶಕ್ಕೆ ನನ್ನನ್ನು ರೇಚಲ್ ಕರೆತಂದಳು, 'ಇದು ನಮ್ಮ ಪ್ರದೇಶ ರಿಫ್ಫಾ... ಅಲ್ಲಿರುವುದು ನಮ್ಮ ಮನೆ...'

ಗೇಟಿನ ಕಪ್ಪು ಮಾರ್ಬಲ್ ಪ್ಲೇಟಿನಲ್ಲಿ 'ಅಂಟೋನಿ ರೆಸಿಡೆನ್ಸ್' ಎಂದು ಬರೆಯಲಾಗಿತ್ತು.

ರೇಚಲ್‌ಳ ಸರಳ ಸುಂದರ ಮತ್ತು ಭವ್ಯ ಮನೆಯೊಳಗೆ ಕಾಲಿಡುತ್ತಲೇ ನನಗೆ ಹಿತವೆನಿಸಿತು. ಮನೆಯ ಸೌಂದರ್ಯದಲ್ಲಿ ದಕ್ಷಿಣ ಭಾರತದ ಛವಿಯಿತ್ತು. ಕೆಲವು ಇಸ್ಲಾಮ್–ಶೃಂಗಾರದ ವಸ್ತುಗಳೂ ಕಾಣಬರುತ್ತಿದ್ದವು. ಈ ಹಿಂದೆ ನಾನು ಮೊಮ್ಬಾಸಾದಲ್ಲಿದ್ದಾಗ, ರೇಚಲ್‌ಗೆ ಆಫ್ರಿಕನ್ ಮಹಿಳೆಯ ಮರದ ವಿಗ್ರಹವನ್ನು ಉಡುಗೊರೆಯಾಗಿ ಕೊಟ್ಟಿದ್ದೆ. ಆ ವಿಗ್ರಹವನ್ನು ಅವಳ ಮನೆಯ ಒಂದು ಮಣೆಯ ಮೇಲೆ ಅಲಂಕಾರಿಕವಾಗಿ ನಿಲ್ಲಿಸಲಾಗಿತ್ತು. ಇದು ನನಗೆ ತುಂಬಾ ಇಷ್ಟವಾಯಿತು. ಅವಳ ಮನೆಯ ಅತ್ತಇತ್ತ ಅಡ್ಡಾಡಿದೆ. ಅದೊಂದು ಎರಡಂತಸ್ತಿನ ವಿಶಾಲ ಮನೆಯಾಗಿತ್ತು. ಅಮ್ಮ ಮತ್ತು ಅಪ್ಪನ ಫೋಟೋಗಳು ಸಹ ಅವಳ ಬೆಡ್‌ರೂಮಿನಲ್ಲಿ ಹಾಕಲಾಗಿತ್ತು. ನಾನೆಂದೂ ನನ್ನ ಮನೆಯಲ್ಲಿ ನನ್ನ ತಂದೆ–ತಾಯಿಯ ಫೋಟೋಗಳನ್ನು ಹಾಕಲಿಲ್ಲ. ಹೇಗೆ ಹಾಕಲಿ? ಒಂದು ಕಾಯಂ ಮನೆಯಿದ್ದಿದ್ದರೆ ಸಾಕಷ್ಟು ಮಾಡಬಹುದಿತ್ತು. ಮನೆಯನ್ನು ಬದಲಾಯಿಸಲಾಗುತ್ತಿತ್ತು; ಅದರೊಂದಿಗೆ ನಾನೂ ಸಹ ಚೆಲ್ಲಾಪಿಲ್ಲಿಯಾಗುತ್ತಿದ್ದೆ.

ರೇಚಲ್‌ಳ ಮುಖದಲ್ಲಿ ಆವರಿಸಿದ್ದ ಮುಗುಳ್ನಗೆಯನ್ನು ನೋಡಿ ಅವಳ ಪತಿ ಜೋಜಫ್ ನನಗೆ ಹೇಳಿದರು, 'ನ್ಯಾನ್ಸಿ, ನಿನ್ನ ಅಕ್ಕನನ್ನು ಮದುವೆಯಾಗಿ ಮುವತ್ತೈದು ವರ್ಷಗಳಾದವು. ನಿನ್ನಕ್ಕನೊಂದಿಗೆ ನೀನಿದ್ದಾಗ ಅವಳು ತುಂಬಾ ಸಂತೋಷದಲ್ಲಿರುವುದನ್ನು ನಾನು ಗಮನಿಸಿದ್ದೇನೆ.'

'ಓಹೋ...' ಎಂದು ನಾನು ರೇಚಲ್‌ಳನ್ನು ಅಪ್ಪಿಕೊಂಡೆ. ಅವಳೂ ಸಹ ನನ್ನನ್ನು ತನ್ನ ಬಾಹುಗಳಲ್ಲಿ ಬಂಧಿಸಿಕೊಂಡಳು. ಜೋಸಫ್ ನಾವಿಬ್ಬರು ಆಲಿಂಗನದಲ್ಲಿವುದನ್ನು ನೋಡಿ ಮಂದವಾಗಿ ಮುಗುಳ್ನಗುತ್ತಾ, ತಮ್ಮ ಮೊಬೈಲ್‌ನಲ್ಲಿ ನಮ್ಮಿಬ್ಬರ ಫೋಟೊ ಹೊಡೆದರು. ಮನುಷ್ಯ ತನ್ನ ಜೀವನದಲ್ಲಿ ಬಹಳಷ್ಟು ಸಂಬಂಧಗಳೊಂದಿಗೆ ಬಂಧಿಸಲ್ಪಟ್ಟಿರುತ್ತಾನೆ. ಕೆಲವು ಸಂಬಂಧಗಳು ಪಿತ್ರಾರ್ಜಿತದಲ್ಲಿ ಲಭಿಸುತ್ತವೆ. ರೇಚಲ್ ಮತ್ತು ಅವಳ ಪತಿ ಜೋಸಫ್ ನಡುವಿನ ಸಂಬಂಧ ಆರೋಗ್ಯಕರವಾಗಿದ್ದು, ಬಲಿಷ್ಠವಾಗಿತ್ತು. ಬಹುಶಃ ಈ ಕಾರಣದಿಂದ ನನಗೆ ಜೋಸಫ್‌ರ ಸಾಮೀಪ್ಯ ಹಿತಕರವಾಗುತ್ತಿತ್ತು.

ರೇಚಲ್ ನನ್ನನ್ನು ಚೆನ್ನಾಗಿ ಸತ್ಕರಿಸಿದಳು, ತನ್ನೆಲ್ಲಾ ಪ್ರೀತಿಯನ್ನು ನನ್ನ ಮೇಲೆ ಸುರಿದಳು. ಎಲ್ಲರೂ ನೀಲ್‌ನನ್ನು ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಅವನು ಬೇಸರಗೊಳ್ಳಬಾರದೆಂದು ನಾನೂ ಗಮನವಹಿಸುತ್ತಿದ್ದೆ. ಅವನಿಗೆ ನನ್ನ ಸಂಬಂಧಿಕರೊಂದಿಗೆ ಇರುವ ಅಭ್ಯಾಸವಿರಲಿಲ್ಲ. ಅವರ ನಡುವೆ ಅವನೊಬ್ಬ ವಿದೇಶಿಯನಾಗಿದ್ದ.

ಅದು ವಿವಾಹ ಸಮಾರಂಭ ನಡೆಯುತ್ತಿದ್ದ ಮನೆಯಾಗಿತ್ತು. ಪರಿವಾರದಲ್ಲಿ ಸಂತಸದ ವಾತಾವರಣವಿತ್ತು. ರೇಚಲ್ ತುಂಬಾ ಉತ್ಸಾಹದಲ್ಲಿದ್ದು, ವ್ಯಸ್ತಳಾಗಿದ್ದಳು. ಅವಳು ನನಗೆ ಮದುವೆಯ ಜವಳಿ, ಆಭರಣಗಳು ಎಲ್ಲವನ್ನೂ ತೋರಿಸಿದಳು. ಅವಳು ಎಲ್ಲವನ್ನೂ ತೋರಿಸಿ ಮತ್ತೆ ಅವುಗಳನ್ನು ಜೋಡಿಸುತ್ತಿದ್ದಳು. ಕೋಣೆಯಲ್ಲಿ ನಾವಿಬ್ಬರು ಮಾತ್ರ ಇದ್ದೆವು. ಎದುರಿನ ಗೋಡೆಗೆ ಹಾಕಿದ್ದ ಅಪ್ಪನ ಫೋಟೋ ನೋಡಿ ನನ್ನ ಮನಸ್ಸಿನಲ್ಲಿ ಬಿರುಗಾಳಿ ಎದ್ದಿತು. ನನಗೆ ಪದೇ ಪದೇ ಅಂದಿನ ಸಂಜೆ ನೆನಪಾಗುತ್ತಿತ್ತು... ಮನಸ್ಸು ಕಹಿಯಾಗುತ್ತಿತ್ತು.

'ರೇಚಲ್!' ನಾನು ಗಟ್ಟಿಯಾಗಿ ಕರೆದೆ.

'ಹೂಂ...' ಅವಳು ತಲೆಯೆತ್ತದೆ ಹೂಗುಟ್ಟಿದಳು.

'ನಿನಗೊಂದು ವಿಷಯವನ್ನು ಹೇಳಬೇಕಿದೆ...'

'ಏನು?'

'ಅಪ್ಪನ ಬಗ್ಗೆ...'

'ಏನು?'

'ಅಂದು ಅಪ್ಪ ನನ್ನನ್ನು ಒಂದು ಬಾರಿಯಲ್ಲ, ಮೂರು ಬಾರಿ ಕರೆದಿದ್ದರು... ಮೂರನೆಯ ಕರೆಯಲ್ಲಿ ಅವರ ಧ್ವನಿಯಲ್ಲಿದ್ದ ಗೊರಗೊರ ಶಬ್ದವನ್ನು ನಾನು ಕೇಳಿದ್ದೆ... ಆದರೂ ನಾನು ಎದ್ದು ಹೋಗಲಿಲ್ಲ... ಜೋಶ್‌ನೊಂದಿಗೇ ಮಾತನಾಡುವುದರಲ್ಲಿ ಮಗ್ನಳಾಗಿದ್ದೆ... ರೋಗಿಯನ್ನು ಕರೆತರುವಲ್ಲಿ ನೀವು ತಡ ಮಾಡಿದಿರಿ ಎಂದು ವೈದ್ಯರು ಹೇಳಿದರು...'

ರೇಚಲ್ ತಲೆಯೆತ್ತಿ ನನ್ನನ್ನು ವಿಚಿತ್ರವಾಗಿ ನೋಡಿದಳು, 'ಇದೇನು ಹರಟುತ್ತಿದ್ದೀಯ...?' ಇದ್ದಕ್ಕಿದ್ದಂತೆ ಅವಳು ರೋದಿಸಿದಳು. ಅವಳು ಎಲ್ಲವನ್ನೂ ಅಲ್ಲಿಯೇ ಬಿಟ್ಟು ಹಾಸಿಗೆ ಮೇಲೆ, ಮನುಷ್ಯನೊಬ್ಬನ ಸಂಪೂರ್ಣ ಶಕ್ತಿ ಹಿಂಡಿದಂತೆ ದಢಾರನೆ ಕೂತಳು. ನಂತರ ಬಿಕ್ಕಳಿಸುತ್ತಾ ಕಿರುಚಿದಳು, 'ಗೆಟ್ ಲಾಸ್ಟ್ ಫ್ರಮ್ ಹಿಯರ್... ನಿನಗೂ ನನಗೂ ಯಾವ ಸಂಬಂಧವಿಲ್ಲ. ಇಲ್ಲಿಗೇಕೆ ಬಂದೆ?'

ನಾನು ಅವಳ ಸಮೀಪಕ್ಕೆ ಹೋದೆ. ಅವಳ ಎರಡೂ ಕೈಗಳನ್ನು ಎತ್ತಿ ಹೇಳಿದೆ, 'ಹೊಡಿ ನನಗೆ... ಹೊಡಿ! ನನಗೇನು ಶಿಕ್ಷೆ ಕೊಡಬೇಕೆಂದಿದ್ದೀಯೋ, ಕೊಡು... ನಾನು ಅಪ್ಪನನ್ನು ಕೊಂದೆ. ನಾನು ನಿಮ್ಮೆಲ್ಲರ ಅಪರಾಧಿಯಾಗಿದ್ದೇನೆ. ಒಂದು ವೇಳೆ ನಾನು ಅವರ ಕರೆಯನ್ನು ತಕ್ಷಣ ಕೇಳಿ, ಅವರ ಬಳಿಗೆ ಹೋಗಿದ್ದರೆ, ಅಪ್ಪಾ ಬಹುಶಃ ಬದುಕುತ್ತಿದ್ದರು... ಇಂದು ಅವರು ನಿನ್ನ ಮಗನ ವಿವಾಹದಲ್ಲಿರುತ್ತಿದ್ದರು...'

ರೇಚಲ್ ನನ್ನ ಗಲ್ಲಕ್ಕೆ ಮೆಲ್ಲನೆ ಹೊಡೆದು ಹೇಳಿದಳು, 'ಹುಚ್ಚಿ, ಹತ್ತು ವರ್ಷಗಳಿಂದ ನೀನು ಈ ವ್ಯರ್ಥದ ದುಃಖವನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದೀಯ... ಕಾರಣವಿಲ್ಲದೆಯೇ ನಿನ್ನನ್ನು ಅಪರಾಧಿ ಎಂದು ತಿಳಿಯುತ್ತಿದ್ದೀಯ. ನಮಗೆ ಅಪ್ಪನ ಆರೋಗ್ಯದ ಬಗ್ಗೆ ಮೊದಲೇ ಎಲ್ಲವನ್ನೂ ಏಕೆ ಹೇಳಲಿಲ್ಲ? ನಮ್ಮನ್ನು ಬೇರೆಯೆಂದು ಏಕೆ ತಿಳಿದೆ?'

'ನೀವು ಹೇಗೆ ರಿಯಾಕ್ಟ್ ಮಾಡ್ತೀರೋ ಎಂಬ ಭಯವಿತ್ತು...'

ರೇಚಲ್ ನನ್ನನ್ನು ಬಿಗಿಯಾಗಿ ತಬ್ಬಿಕೊಂಡು ಹೇಳಿದಳು, 'ನ್ಯಾನ್ಸಿ, ನೀನು ನಿನ್ನನ್ನೇ ದೋಷಿಯೆಂದು ತಿಳಿಯಬೇಡ. ಹಿರಿಯರಿಗೆ ನಾವೆಷ್ಟೇ ಮಾಡಿದರೂ ಕಡಿಮೆಯೇ. ನಿನ್ನದೇನೂ ತಪ್ಪಿಲ್ಲ... ಅಪ್ಪನಿಗೆ ವಯಸ್ಸಾಗಿತ್ತು, ಹೋದರು...'

'ಸಾವು ಎಲ್ಲದಕ್ಕಿಂತ ಅಸಾಧಾರಣ ಘಟನೆಯಾಗಿದೆ. ಸಾವಿನ ರಹಸ್ಯ ಯಾರಿಗೂ ತಿಳಿದಿಲ್ಲ' ಎಂದ ಪಾಲ್.

ನಿಜ ಪಾಲ್, ನನಗೆ ಅಂದು ರೇಚಲ್ ಎದುರು ಎಲ್ಲವನ್ನೂ ಹೇಳಿ ಮನಸ್ಸಿಗೆ ತುಂಬಾ ಶಾಂತಿ ಲಭಿಸಿತು. ಅದೆಷ್ಟೋ ವರ್ಷಗಳಿಂದ ಮನಸ್ಸಿನಲ್ಲಿ ಹತ್ತಿಕ್ಕಿಕೊಂಡಿದ್ದ ದುಃಖದ ಭಾರ ಇಳಿದಿತ್ತು.

(ಸಶೇಷ)